the Long Title, the Premable and the Enacting Formula do stand part of the Bill ".

The motion was adopted

Clause 1, the Long Title, the Preamble and the Enacting Formula were added to the Bill

MOTION TO PASS

Sri A. Lakshmisagar (Minister for Law and Parlimentary Affairs, on behalf of Sri V. L Patil, Minister of Revenue) — I beg to move : " The Karnataka Inams Abolition Laws (Amendment) Bill, 1984 be passed "-

Mr. Deputy Speaker — The question is : " That the Karnataka Inams Abolition Laws (Amendment) Bill, 1984 be passed "-

The motion was adopted and the bill was passed

— — —

The Karnataka State Universities (Amendment) Bill, 1984

Motion to consider

Sri B. Rachaiah (Minister for Education)— I move : "That the Karnataka State Universities (Amendment) Bill, 1984 be taken into consideration ".

The question was proposed

ಉಪಾಧ್ಯಕ್ಷರು. — ಮಾನ್ಯ ಸಚಿವರು ವಿಧೇಯಕದ ಬಗ್ಗೆ ವಿವರಣೆ ಕೊಡಿ.

ಶ್ರೀ ಬಿ. ರಾಚಯ್ಯ.— ಮಾನ್ಯ ಉಪಾಧ್ಯಕ್ಷರೆ. ಈ ವಿಧೇಯಕದಲ್ಲಿ ಮೂರು ತಿದ್ದುಪಡಿಗಳನ್ನು ತಂದಿದ್ದೇವೆ. ಮೊದಲನೆಯದಾಗಿ ವಿಶ್ವವಿದ್ಯಾನಿಲಯದ ಸೆನೆಟ್ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಮೀಟಿಂಗ್ ನಡೆಯತಕ್ಕ ಸಂದರ್ಭದಲ್ಲಿ ಯಾರಾದರೂ ನ್ಯಾಯಾಲಯಕ್ಕೆ ಹೋಗುವ ಅವಕಾಶವಿದೆ. ನ್ಯಾಯಾಲಯದಿಂದ ತಡೆಯಾಜ್ಞೆ ಬಂದರೆ ಮೀಟಿಂಗ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನ್ಯಾಯಾಲಯದಿಂದ ತಡೆಯಾಜ್ಞೆ ಬಂದರೂ ಸಭೆಯಲ್ಲಿ ಮುಕ್ಕಾಲು ಭಾಗ ಸದಸ್ಯರು ಇದ್ದರೆ ಮೀಟಿಂಗ್ ಮಾಡುವುದಕ್ಕೆ ಅನುಕೂಲವಾಗುವಂತೆ ಸೆನೆಟ್ ಎಂದು ಹೇಳಿರುವುದನ್ನು ಒಂದು ತಿದ್ದುಪಡಿ. ಎರಡನೆಯ ತಿದ್ದುಪಡಿ ಯೂನಿವರ್ಸಿಟಿ ಗ್ರಾಂಟ್ ಕಮೀಷನ್ ಆರ್ಟಿಕಲ್ 12ರ ಪ್ರಕಾರ, ನಮಗೆ ಗ್ರಾಂಟ್ ಕೊಡಬೇಕಾದ ಪಕ್ಷದಲ್ಲಿ ನಾವು ರೆಕಗ್ನೈಸ್ ಮಾಡಬೇಕಾಗುತ್ತದೆ. ರೆಕಗ್ನೈಸ್ ಮಾಡಬೇಕಾದರೆ ಯೂನಿವರ್ಸಿಟಿಯಲ್ಲಿ ಒಂದು ಪ್ಲಾನಿಂಗ್ ಬೋರ್ಡ್ ಮಾಡಬೇಕೆಂದು ಅವರು ಹೇಳಿದ್ದಾರೆ, ಯೂನಿವರ್ಸಿಟಿ ಪ್ಲಾನಿಂಗ್ ಬೋರ್ಡ್ ಮಾಡಿದರೆ ಯೂನಿವರ್ಸಿಟಿ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟ್‌ಗೆ ರೆಕಗ್ನೈಸ್ ಪಡೆಯುವುದಕ್ಕೋಸ್ಕರ ಅವರು ಏನೊಂದು ಸೂಚನೆ ಕೊಟ್ಟಿದ್ದಾರೆ. ಅದರ ಪ್ರಕಾರ 'ಯೂನಿವರ್ಸಿಟಿ ಪ್ಲಾನಿಂಗ್ ಬೋರ್ಡ್' ಮಾಡುತ್ತೇವೆ. ಅದಕ್ಕೋಸ್ಕರ ತಿದ್ದುಪಡಿ ತಂದಿದ್ದೇವೆ. ಮೂರನೆಯದಾಗಿ ಕೆಲವು ವಿಶ್ವವಿದ್ಯಾನಿಲಯಗಳ ಹಿಡಿತದಲ್ಲಿರತಕ್ಕ ಕಾಲೇಜುಗಳವರು ಅಲ್ಲಿ ಅಕಾಡೆಮಿಕ್ ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಅವರ ಪರೀಕ್ಷೆಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳುವುದಕ್ಕೆ ಕೇಳಿದ್ದಾರೆ. ಯೂನಿವರ್ಸಿಟಿ ಗ್ರಾಂಟ್ ಕಮೀಷನ್‌ರವರು ಮಂಗಳೂರು ಮತ್ತು ಗುಲ್ಬರ್ಗ ಯೂನಿವರ್ಸಿಟಿಗಳಿಗೆ ಗ್ರಾಂಟ್-ಇನ್-ಏಡ್ ರೆಕಗ್ನೈಸ್ ಕೊಡದೆ ಇರುವುದರಿಂದ, ಎರಡೂ ಯೂನಿವರ್ಸಿಟಿಗಳನ್ನು ಕಂಟಿನ್ಯೂ ಮಾಡುತ್ತೇವೆಂದು ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ರಾಜ್ಯಪಾಲರ ಜೊತೆಯಲ್ಲಿ ಚರ್ಚೆ ಮಾಡಿ ಈ ರೀತಿ ಮಾಡಿದ್ದೇವೆಂದು ಹೇಳಿದ ಮೇಲೆ ಯು. ಜಿ. ಸಿ. ಯವರು ಒಪ್ಪಿಕೊಂಡಿದ್ದಾರೆ. ಈ ರೀತಿ ಮಾಡಿದರೆ ಯು. ಜಿ. ಸಿ. ಯಿಂದ ನಮಗೆ ಅನುಕೂಲಗಳು ಸಿಗುತ್ತವೆ.

ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿದ್ಯಾಮಂತ್ರಿಗಳು ತಿದ್ದುಪಡಿ ತಂದಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎರಡು ಕ್ಲಾಸ್‌ಗೆ ಹೊಸ ವಿಧಿನಿಯಮಗಳ ಪ್ರಕಾರ ಸೆಕ್ಷನ್ 56(ಎ) ಮತ್ತು 61(ಎ) ಮತ್ತು ಸೆಕ್ಷನ್ 33ರಲ್ಲಿ ಕ್ಲಾಸ್-(2) ಸಬ್ ಕ್ಲಾಸ್-3ನಲ್ಲಿ

ಉಪನಿಯಮಗಳನ್ನು ಸೇರಿಸಿದ್ದಾರೆ. ಮಾನ್ಯ ಮಂತ್ರಿಗಳು ತಿದ್ದುಪಡಿಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಮತ್ತೊಂದು ವಿಚಾರವನ್ನು ಹೇಳಿದ್ದಾರೆ. ಯೂನಿವರ್ಸಿಟಿ ಗ್ರಾಂಟ್ ಕಮೀಷನ್‌ರವರು ಯೂನಿವರ್ಸಿಯಲ್ಲಿ 'ಯೂನಿವರ್ಸಿಟಿ ಪ್ಲ್ಯಾನಿಂಗ್ ಬೋರ್ಡ್' ಮಾಡಬೇಕೆಂದು ಹೇಳಿದ್ದಾರೆಂದು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪೂರ್ವಭಾವಿಯಾಗಿ ಇಲ್ಲಿ ಏನಾಗಿದೆ ಅಂದರೆ they have added sub clause (3) to Section 33 of the Original Act.

ಅದರಲ್ಲಿ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ Senateಗಳಲ್ಲಿ ಮುಕ್ಕಾಲು ಭಾಗ ಸದಸ್ಯರು ಇದ್ದರೆ ಡ್ಯೂಲಿ ಕಾನ್ಸ್‌ಟ್ಯೂಟ್ ಎಂದು ಮಾಡತಕ್ಕದ್ದು. ಕಾರಣಾಂತರಗಳಿಂದ ನವೆಂಬರ್‌ನಲ್ಲಿ ಒಂದು ಆರ್ಡಿನೆನ್ಸ್ ಬಂತು. ರೀಪ್ಲೇಸ್ ಬಿಲ್ ಆಗ್ದೆ ಇರುವುದರಿಂದ ಈ ಬಿಲ್ ಈಗ ನಮ್ಮ ಮುಂದೆ ಬಂದಿದೆ. ರೆಕಗ್ನೈಸ್ ಮೊನ್ನೆ ತಾನೇ ಡಿಸೆಂಬರ್‌ನಲ್ಲಿ ಮಾಡಿದ್ದಾರೆ. ಆಗಸ್ಟ್ ಸಭೆಯ ಮುಂದಿತ್ತು, ಸೆಪ್ಟೆಂಬರ್ 23ಕ್ಕೆ ಸಭೆ ಮುಂದೆ ಹೋಯಿತು. ಅಲ್ಲಿಂದ ಡಿಸೆಂಬರ್‌ವರೆಗೆ ಇದರ ಬಗ್ಗೆ ಚಿಂತನೆ ಮಾಡದೆ ಇರುವುದಕ್ಕೆ ಸರ್ಕಾರ ಉತ್ತರ ಕೊಡಬೇಕು. ಸೆನೆಟ್ ಆದ ಮೇಲೆ ಸಿಂಡಿಕೇಟ್‌ಗೆ ಎಲ್ಲಾ ಕಡೆ ಚುನಾವಣೆ ನಡೆದಿದೆ. ಯಾರಾದರೂ ಕೋರ್ಟಿಗೆ ಹೋದರೆ ಎಂದು ಹೇಳಿ, ಸಬ್ ಕ್ಲಾಸ್-(3)

" (3) Notwithstanding anything contained in sections 21, 24, and 26 or in any law or judgement or degree or order of any court, the Senate or the Syndicate or the Academic Council shall be deemed to have been duly constituted or reconstituted, when it is constituted or reconstituted with not less than three-fourth of the total number of members thereof ".

ಈಗ ನಡೆದಿರತಕ್ಕ ಚುನಾವಣೆ ಸಿಂಧು ಆಗತಕ್ಕದ್ದನ್ನು ಈ ಒಂದು ಸೆಕ್ಷನ್ ಅವಕಾಶ ಮಾಡಿಕೊಡುತ್ತದೆ. ನನಗೆ ತಿಳಿದ ಹಾಗೆ ತಾವು ಕೂಡ ಪ್ರಸ್ತಾಪಮಾಡಿದ್ದೀರಿ, ಚುನಾವಣೆ ನಡೆದು ಕೋರ್ಟಿನಲ್ಲಿ ಸಿಂಧು, ಅಸಿಂಧು ಎಂದು ಪ್ರಶ್ನೆ ಮಾಡುವ ಹಂತದಲ್ಲಿರುವಾಗ, ಅದು ಸಿಂಧು ಚುನಾವಣೆ ಆಗತ್ತದೆ ಎನ್ನುವ ರೀತಿಯಲ್ಲಿ ಅದಕ್ಕೆ ಒಂದು ತಿದ್ದುಪಡಿ ಬಂದಿದೆ. ನನ್ನ ದೃಷ್ಟಿಯಲ್ಲಿ ಇದು ಸರಿಯಾಗಲಾರದು. ಒಂದು ವೇಳೆ ಅಲ್ಲಿ ತಾವು ಜಡ್ಜ್‌ಮೆಂಟ್ ಕಾಯ್ದು ಮಾಡಿದ್ದರೆ ಒಳ್ಳೆಯದು ಆಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ನನ್ನ ವೈಯುಕ್ತಿಕ ಅಭಿಪ್ರಾಯವನ್ನು ನಾನು ವ್ಯಕ್ತ ಮಾಡುತ್ತಿದ್ದೇನೆ. ಯಾವುದೇ ಒಂದು ಕಾರಣದಿಂದ ಕೋರ್ಟಿನಲ್ಲಿ ಒಂದು ಕಾನೂನನ್ನು ಪ್ರಶ್ನೆ ಮಾಡಿರುವಾಗ, ಅದನ್ನು ಸರಿ ಮಾಡುವುದನ್ನು ಬಿಟ್ಟು ಮತ್ತೊಂದು ಕಾನೂನು ತರತಕ್ಕದ್ದು ಒಳ್ಳೆಯ ಅಭ್ಯಾಸವಲ್ಲ. ಇದು ಒಳ್ಳೆಯ ಕ್ರಮವಲ್ಲ, ನಾನು ಅದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಕ್ಲಾಸ್(3) ಸೆಕ್ಷನ್ 56(ಎ) ತಾವೇನು ತಿದ್ದುಪಡಿ ತಂದಿದ್ದೀರಿ ಅದರ ಬಗ್ಗೆ ಸರ್ಕಾರ ಸರಿಯಾದ ಸಮಜಾಯಿಷಿ ಕೊಡಲಿಲ್ಲವೆಂದು ನಾನಾದರೂ ಭಾವಿಸುತ್ತೇನೆ. ಇದರಿಂದ ಏನಾಗುತ್ತದೆ ಅಂದರೆ, ಈ ಕಾನೂನನ್ನು ನಾವು ಓದಿದರೆ ಈ ನಿಯಮವನ್ನು ನಾವು ನೋಡಿದರೆ, ಯೂನಿವರ್ಸಿಟಿ ಮತ್ತು ಸಣ್ಣ ವಿಶ್ವವಿದ್ಯಾನಿಲಯಗಳು ಮತ್ತೊಂದು ವಿಶ್ವವಿದ್ಯಾನಿಲಯವನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ. ಆ ರೀತಿಯ ಒಂದು ಕಾಲಂ ಇದೆ. ಯಾವುದೇ ಒಂದು ಕಾಲೇಜು ಆಗಬಹುದು, ಒಂದು ವಿಷಯದ ಬಗ್ಗೆ ವಿಚಾರ ಆಗಬಹುದು

" Notwithstanding anything contained in this Act or the Statutes, Ordinances and Regulations made thereunder, the University may, with the prior concurrence of the State Govt ..... "

ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಿಂಡಿಕೇಟ್, ಸೆನೆಟ್ ಅಕಾಡೆಮಿಕ್ ಕೌನ್ಸಿಲ್ ಒಪ್ಪಿ ಮಾಡತಕ್ಕ ವಿಚಾರವನ್ನು, ಸರ್ಕಾರ ಮಾಡತಕ್ಕ ಕಾನೂನನ್ನು 56(ಎ)ಯಲ್ಲಿ ತಿದ್ದುಪಡಿ ಮಾಡಿ ಸರ್ಕಾರ ಅಧಿಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ. ".....with the prior concurrence of the State Government and the U. G. C ....". ನೇರವಾಗಿ ಸರ್ಕಾರ ಮತ್ತು ಗ್ರಾಂಟ್ ಕಮೀಷನ್ ಯಾವುದರ ಬಗ್ಗೆ,

" - ....designation for such period as may be specified, an affiliated college, department or unit as an Autonomous college for any course of study, after following the procedure and subject to such conditions as may be prescribed in the statutes made in this behalf and with a view to improve the quality of education and to introduce new and relevent courses of study ".

ನಾನು ಅದಕ್ಕೆ ಹೇಳಿದ್ದು ವಿಶ್ವವಿದ್ಯಾನಿಲಯದೊಳಗೆ ಮತ್ತೊಂದು ಉಪ ವಿಶ್ವವಿದ್ಯಾನಿಲಯವನ್ನು ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೀವೆ ಎಂದು. ಇದರಿಂದ ಸರ್ಕಾರ ತನಗೆ ಮನಸ್ಸಿಗೆ

ಬಂದಂತೆ ಬೇಕಾದಂಥ ವಿಷಯದ ಬಗ್ಗೆ ಈ ವ್ಯವಸ್ಥೆಯನ್ನು ಮಾಡಲಿಕ್ಕೆ ಅನುಕೂಲವಾಗುವುದಿಲ್ಲವೆ ? ಇದರ ಅವಶ್ಯಕತೆ ಏನಿತ್ತು ? ಯಾವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೀರಿ ? ಇವತ್ತು ಒಂದು ಕಡೆ ನಾವು ವಿದ್ಯಾಭಾಸ ಕ್ರಮದ ನೀತಿ ಬಗ್ಗೆ ಬದಲಾವಣೆ ಆಗಬೇಕು ಎನ್ನುವ ಮಾತನ್ನು ಹೇಳತಕ್ಕಂಥ ಸಂದರ್ಭದಲ್ಲಿ, ಅದೂ ಕೂಡ ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ಬದಲಾವಣೆ ಆಗಬೇಕೆಂದು ಹೇಳುತ್ತಿರುವ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಹೇಳುವುದಾದರೆ ಕೋಠಾರಿ ಕಮೀಷನ್, ರಾಧಾಕೃಷ್ಣ ಕಮೀಷನ್ ರಿಪೋರ್ಟ್ ಇದೆ. ಈ ರಿಪೋರ್ಟ್‌ಗಳಲ್ಲಿ ಈ ವಿಚಾರದ ಬಗ್ಗೆ ಏನಾದರೂ ಇದೆಯೆ ? ಸರ್ಕಾರ ಇದರ ಬಗ್ಗೆ ವ್ಯಕ್ತ ಮಾಡಿರತಕ್ಕಂಥ ವಿಚಾರಗಳನ್ನು ಗಮನಕ್ಕೆ ತೆಗೆದು ಕೊಂಡಿರುವುದಾಗಲೀ, ಯಾವ ಉದ್ದೇಶದಿಂದ ಒಂದು ಕಾಲೇಜು, ಒಂದು ಡಿಪಾರ್ಟ್‌ಮೆಂಟ್ ಅಥವಾ ಒಂದು ಯೂನಿಟ್‌ಗೆ ಆಟಾನಮಸ್ ಸ್ಟೇಟಸ್ ಕೊಡತಕ್ಕ ಪ್ರಯತ್ನ ಮಾಡುತ್ತಿದ್ದೀರಿ ? ನಾಲ್ಕನೇ ಕ್ಲಾಸ್‌ನಲ್ಲಿ ಹೀಗೆ ಹೇಳಿದೆ—"The Statutes for this purpose shall be made in consultation with the Academic Council of the University ಮತ್ತೆ ಯಾವುದೇ ಅಕಾಡೆಮಿಕ್ ಕೌನ್ಸಿಲ್ ಮುಂದೆ ಇದು ಬರುತ್ತದೆ. ಹೀಗಿರುವಾಗ ಇದರ ಅವಶ್ಯಕತೆ ಏನಿತ್ತು ? ಏತಕ್ಕೋಸ್ಕರ ಮಾಡುತ್ತಿದ್ದೀರಿ ? ನನ್ನ ದೃಷ್ಟಿಯಲ್ಲಿ ಇದರ ಅಗತ್ಯವಿಲ್ಲವೆಂದು ನಾನಾ ದರೂ ಭಾವಿಸುತ್ತೇನೆ. ಯಾವುದೇ ಒಂದು ಕ್ಲಾಸ್‌ನಲ್ಲೂ ಇಂತಹದ್ದೇ ಕಾಲೇಜು ಅಥವಾ ಇಂಥಾದ್ದೇ ವಿಷಯವೆಂದು ಸ್ಪಷ್ಟವಾಗಿ ಹೇಳಿಲ್ಲ. ಇದರಿಂದ ಸರ್ಕಾರ ತನಗೆ ಮನಸ್ಸಿಗೆ ಬಂದ ಹಾಗೆ ವಿಚಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಾವು ಎಲ್ಲಿಯವರೆಗೆ ಹೋಗಿದ್ದೇವೆ ಎಂದರೆ, ನಮ್ಮ ರಾಜ್ಯದಲ್ಲಿರತಕ್ಕಂಥ ಕಾಲೇಜುಗಳನ್ನು ಬೇರೆ ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ಅಫಿಲಿಯೇಟ್ ಮಾಡಿಕೊಟ್ಟಂತಹ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಕಾಲೇಜನ್ನು ಬೇರೆ ವಿಶ್ವವಿದ್ಯಾಲಯಕ್ಕೆ ಅಫಿಲಿಯೇಟ್ ಮಾಡಿ ಕೊಡತಕ್ಕಂಥ ಅಧಿಕಾರ ಈ ಸದನಕ್ಕಿದೆ. ಯಾವುದಾದರೂ ಒಂದು ವರ್ಗದ ಒತ್ತಾಯಕ್ಕೆ ಮಣಿದು ಇಂತಹ ಪರಿಸ್ಥಿತಿ ನಿರ್ಮಾಣಕ್ಕೆ ಸಾಧ್ಯವಾಗುತ್ತದೆ. ಇಂತಹ ವಿಚಾರ ಇರುವಾಗ 56ಎ ನಲ್ಲಿ ಸರ್ಕಾರ ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗತಕ್ಕಂಥಾದ್ದು ಇದೆ. ಈ ಒಂದು ನಿಯಮ ಅನಾವಶ್ಯಕವಾದಂಥ ನಿಯಮ ಪ್ಲಾನಿಂಗ್ ಬೋರ್ಡ್ ಬಗ್ಗೆ ಹೇಳಿದ್ದೀರಿ. ಇದು ಏನು ಹೇಳುತ್ತದೆ ಎಂದರೆ ಐದು ಜನ ಪರಿಣಿತರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಇಟ್ಟುಕೊಂಡಿದ್ದೀರಿ—

The Chancellor may, in consultation with the State Government, constitute a Planning Board consisting of not more than Five eminent educationists to advice with regard to anv matter..... ಹಾಗಂತ ಹೇಳುತ್ತದೆ. ತದನಂತರ ಅವರದ್ದೇ ಆಖೈರು ಅಲ್ಲ. ಅಕಾಡೆಮಿಕ್ ಕೌನ್ಸಿಲ್ ಮುಂದೆ ಮತ್ತೆ ಅದು ಕನ್‌ಸಲ್ಟೇಷನ್ ಬರುತ್ತದೆ. ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಅಭಿಪ್ರಾಯ ಒಂದೇ ಆಗಿದ್ದರೆ ತಿರಸ್ಕಾರ ಮಾಡುವ ಸಾಧ್ಯತೆ ಇದೆ. ಅಂದರೆ, ಇವರನ್ನು ಏನು ನೇಮಕ ಮಾಡುತ್ತಾರೆ, ಅವರ ಅಭಿಪ್ರಾಯಕ್ಕೆ ಮಾನ್ಯತೆ ದೊರಯದೇ ಇರುವ ಪರಿಸ್ಥಿತಿ ಬಂದರೆ ಇದರಿಂದ ತೊಂದರೆ ಯಾಗುವುದಿಲ್ಲವೇ ? ಇದನ್ನು ಬೇರೆ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯ ಇದೆಯೆ ? ಅದಕ್ಕೆ ನಾನು ಹೇಳಿದ್ದು, ರಾಧಾಕೃಷ್ಣ ರಿಪೋರ್ಟಿನಲ್ಲಾಗಲೀ, ಕೋಠಾರಿ ರಿಪೋರ್ಟ್‌ನಲ್ಲಾಗಲೀ ಇಂತಹ ವಿಚಾರಗಳ ಬಗ್ಗೆ ಏನಾದರೂ ಪ್ರಸ್ತಾಪ ಆಗಿದೆಯೇ ಎಂದು. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಈ ಒಂದು ವಿಚಾರದಲ್ಲಿ ಈ ಸಭೆಯ ಮೂಲಕ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಪಡುತ್ತೀರಾ ? ಈ ಮಾತನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಮಗೆ ಗೊತ್ತಿರುವಂತೆ ಈ ಪ್ಲಾನಿಂಗ್ ಬೋರ್ಡ್‌ನ ಅಭಿಪ್ರಾಯ ಏನಿದೆ, ಅದು ಕೊನೆಯ ಅಭಿಪ್ರಾಯ ಅಲ್ಲ..... Every report of the Planning Board shall be placed before the Academic Council and Senate for consideration and such actions as deemed fit ..... ಹಾಗಂತ ಅದು ಹೇಳುತ್ತದೆ. ಆದುದರಿಂದ ಪ್ಲಾನಿಂಗ್ ಬೋರ್ಡಿನದ್ದೇ ಕೊನೆಯ ಅಭಿಪ್ರಾಯ ಆಗುವುದಿಲ್ಲ. ಈ ಅಭಿಪ್ರಾಯವನ್ನು ಒಂದು ವೇಳೆ ತಿರಸ್ಕಾರ ಮಾಡುವುದಾದರೆ ಈ ಪ್ಲಾನಿಂಗ್ ಬೋರ್ಡನ್ನು ಮಾಡಿ ಏನು ಪ್ರಯೋಜನವಾಗುತ್ತದೆ ? ಇದರಿಂದ ಹೊಸ ಖರ್ಚು ಏನಿಲ್ಲವೆನ್ನುವ ಮಾತನ್ನು ತಾವು ಹೇಳಿದ್ದೀರಿ. ಇದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಮುಖ್ಯ ಅಭಿಪ್ರಾಯ ಏನಿದೆ ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕೆಂದು ಹೇಳುತ್ತೇನೆ. ಸೆಕ್ಷನ್ 56ಎ ಏನಿದೆ ಅದನ್ನು ಇನ್ನೂ ಸ್ವಲ್ಪ ಸ್ಪಷ್ಟೀಕರಿಸಬೇಕು. ನನ್ನ ದೃಷ್ಟಿಯಲ್ಲಿ ಇದು ಅನಾವಶ್ಯಕವಾದದ್ದು ಮತ್ತು ಸಬ್ ಕ್ಲಾಸ್ 3 ಏನಿದೆ ನಮಗೆ ಅಧಿಕಾರ ಇರಬಹುದು. ಈ ಸಭೆ ಸರ್ವೋಚ್ಚವಾದದ್ದು. ಎಲ್ಲಾ ರೀತಿಯ ಕಾನೂನನ್ನು ಮಾಡುವುದಕ್ಕೆ ಅಧಿಕಾರ ಇದೆ. ಹಾಗೆ ಮಾಡುವಾಗ ಈ ಕಾನೂನನ್ನು ಈ ರೀತಿಯಾಗಿ ಉಪಯೋಗ ಮಾಡಿಕೊಳ್ಳುವುದು ಸರಿಯೇ ? ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂಖ್ಯಮಂತ್ರಿಯವರಿಗೆ ನನ್ನ

ಅಭಿಪ್ರಾಯವನ್ನು ವ್ಯಕ್ತಮಾಡಿ ನನಗೆ ಮಾತನಾಡಲು ಅಪ್ಪಣೆ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಈ ಚಿನ್ಹೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಅನುದಾನ ಪಡೆಯುವುದಕ್ಕೋಸ್ಕರ ಕೆಲವು ಷರತ್ತುಗಳನ್ನು ಯೂನಿವರ್ಸಿಟಿ ಗ್ರಾಂಟ್ ಕಮೀಷನ್‌ನವರು ನಮಗೆ ಕಳಿಸಿಕೊಟ್ಟಿದ್ದರು. ಅದರ ಪ್ರಕಾರ ನಮ್ಮ ಹಳೆಯ ಬಿಲ್‌ನಲ್ಲಿ ಸೆಕ್ಷೀ 33ರಲ್ಲಿ ಈ ಒಂದು ಅಮೆಂಡ್‌ಮೆಂಟ್‌ನ್ನು ತಂದಿರತಕ್ಕದ್ದು ಆಗಿದೆ. ಇದು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಒಬ್ಬರು ಶ್ರೇಷ್ಟ ನ್ಯಾಯಾಲಯಕ್ಕೆ ಹೋಗಿ ಚುನಾವಣೆ ಆಗದಹಾಗೆ ಮಾಡಿದ್ದರು. ಹೀಗೆ ಯಾರಾದರೂ ಅಡ್ಡಿ ಮಾಡುವುದರಿಂದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮೀಟಿಂಗ್ ಆಗಲಿ, ಸೆನೆಟ್ ಮೀಟಿಂಗ್ ಆಗಲಿ, ಅಥವಾ ಅಕಾಡೆಮಿಕ್ ಕೌನ್ಸಿಲ್ ಮೀಟಿಂಗ್ ಆಗಲಿ ನಡೆಯುವುದಕ್ಕೆ ಆಗುವುದಿಲ್ಲ. ಮೂರನೇ ನಾಲ್ಕರಷ್ಟು ಭಾಗದಷ್ಟು ಸದಸ್ಯರಾಗಲೀ ಚುನಾಯಿತರಾಗಿದ್ದರೆ ಚುನಾವಣೆ ಆಯಿತು ಎಂದು ಮಾಡಿಕೊಂಡರೆ ಕೊನೆಯಪಕ್ಷ ವಿಶ್ವವಿದ್ಯಾನಿಲಯದಲ್ಲಿ ಆಗಾಗ್ಗೆ ನಡೆಯಬೇಕಾದ ಸಭೆಗಳು ನಡೆಯಲಿ, ಕೆಲಸಕಾರ್ಯಗಳು ನಡೆಯುವಂತಾಗಲಿ ಎಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾಗಿದೆ. ಇದರ ಬಗ್ಗೆ ಆರ್ಡಿನೆನ್ಸ್ ತಂದಿದ್ದು ಈಗ ಬಿಲ್ ರೂಪದಲ್ಲಿ ತಂದಿದ್ದೇವೆ. ಮುಂದೆಯೂ ಕೂಡ ಇಂತಹ ತಕರಾರುಗಳು ಬರಬಹುದು. ಯಾರಾದರೂ ಕೋರ್ಟಿಗೆ ಹೋಗಿ ಮೀಟಿಂಗ್‌ಗಳು ನಡೆಯದ ಹಾಗೆ ಮಾಡಬಹುದು. ಮೂರನೇ ನಾಲ್ಕರಷ್ಟು ಸದಸ್ಯರು ಕಾನ್ಸ್ಟ್ಟ್ಯೂಟ್ ಆಯಿತು, ಮೀಟಿಂಗ್ ನಡೆಸಬಹುದೆಂದು ಮಾಡುವುದಕ್ಕಾಗಿ ಇದನ್ನು ತಂದಿದ್ದೇವೆ. ವಿಶ್ವವಿದ್ಯಾನಿಲಯದ ಕೆಲಸಗಳು ನಡೆಯಲಿ ಎನ್ನುವ ಉದ್ದೇಶವೇ ವಿನಹ ಇಲ್ಲಿ ಯಾರನ್ನೂ ರಕ್ಷಿಸುವ ಉದ್ದೇಶ ಇಲ್ಲ. ಎರಡನೆಯದಾಗಿ ಕೊಠಾರಿ ಕಮೀಷನ್ ಮತ್ತು ಗಜೇಂದ್ರಗಡ್ಕರ್ ಕಮೀಷನ್‌ನವರು ಆಟಾನಮಸ್ ಬಾಡಿ ಬೇಕೆಂದು ಶಿಫಾರಸ್ಸು ಮಾಡಿದ್ದರು. ಅದರ ಪ್ರಕಾರ ಯೂನಿವರ್ಸಿಟಿ ಗ್ರಾಂಟ್ ಕಮೀಶನ್‌ನವರು ಇವತ್ತು ಆಟಾನಮಸ್ ಬಾಡಿ ಏಕೆ ಇರಬೇಕೆಂದು ಕೇಳಿ ಕೆಲವು ಸಂದರ್ಭದಲ್ಲಿ ಪರಿಣತರು ಬೇಕು ಸ್ವಾಯತ್ತತೆ ಇರಬೇಕು ಮತ್ತು ಸಾಕಷ್ಟು ಮಟ್ಟಿಗೆ ಇದಕ್ಕೆ ಅವಕಾಶ ನೀಡಬೇಕೆಂದು ಇದನ್ನು ಸೇರಿಸಿ ಎಂದು ಬರೆದಿದ್ದರು. ಹಿಂದೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಒಂದು ಕಾಲೇಜನ್ನು ಬೇರೆ ಹೊರನಾಡಿನಲ್ಲಿರತಕ್ಕಂತ ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಮಾಡಿದ್ದಾರೆ ಎಂದರೆ ಅದು ವಿಪರ್ಯಾಸವಾಗುತ್ತದೆ. ಆಟಾನಮಸ್ ಕಾಲೇಜನ್ನು ಒಪ್ಪಿಕೊಳ್ಳಬೇಕೆಂದು ಕೊಠಾರಿ ಕಮೀಶನ್ ಮತ್ತು ಗಜೇಂದ್ರಗಡ್ಕರ್ ಕಮೀಶನ್ ವರದಿಯಲ್ಲಿ ಕೂಡ ಇದೆ. ಇದನ್ನು ಮಾಡುವುದರಿಂದ ಅಕಾಡೆಮಿಕ್ ಎಕ್ಸಲೆನ್ಸ್ ಮಾಡುವುದಕ್ಕೋಸ್ಕರ ಅವಕಾಶ ಮಾಡಿದ ಹಾಗೆ ಆಗುತ್ತದೆ ಒಪ್ಪಿಕೊಳ್ಳಿ ಎಂದು ಇದನ್ನು ಬರೆದಿದ್ದಾರೆ.

ಇನ್ನು ಎರಡನೆಯದಾಗಿ ಹೇಳಬೇಕಾದರೆ ಇಂಡಿಪೆಂಡೆಂಟ್ ಪ್ಲಾನಿಂಗ್ ಬೋರ್ಡ್ ಮಾಡಬೇಕೆಂದು ಛಾನ್ಸ್‌ಲರ್ ಅನ್ನು ಕೇಳಿದಾಗ This should be a creation of Academic Council, this should be over and above this academic Council, Senate, Syndicate ಅನ್ನುವ ಅಭಿಪ್ರಾಯ ಬಂತು. ಇದರ ಮೇಲೆ ಅಕಾಡಮಿಕ್ ಕೌನ್ಸಿಲ್ ಮೀಟಿಂಗ್ ಕರೆದು ಅವರ ಒಂದು ಒಪ್ಪಿಗೆ ಮೇಲೆ ಇದನ್ನು ಮಾಡಿದ್ದೇವೆ. ತಮಗೆ ಹೇಳಬೇಕಾದರೆ ಮಂಗಳೂರು ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಇದುವರೆಗೆ 2.5 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಯೂನಿವರ್ಸಿಟಿ ಗ್ರಾಂಟ್ಸ್ ಕಮೀಶನ್ನಿನವರು ನಮಗೆ ಗ್ರಾಂಟ್ ವಗೈರೆ ನೆರವು ಕೊಡಬೇಕಾದರೆ ಈ ರೀತಿಯಾದ ಒಂದು ಪ್ಲಾನಿಂಗ್ ಬೋರ್ಡ್ ಇರಬೇಕೆಂದು ಸೂಚಿಸಿದ್ದರು. ಹಾಗೆ ಮಾಡದೇ ಹೊದರೆ ನಮಗೆ ಅವರಿಂದ ಗ್ರಾಂಟ್ ಸಿಕ್ಕುವುದಿಲ್ಲ. ಆದುದರಿಂದ ಈ ಒಂದು ಮಸೂದೆಯನ್ನು ಅವರ ಸಲಹೆ ಪ್ರಕಾರ ತಂದಿದ್ದೇನೆ. ತಾವು ಈ ಒಂದು ತಿದ್ದುಪಡಿಯನ್ನು ಒಪ್ಪಿಕೊಂಡರೆ ವಿಶ್ವವಿದ್ಯಾನಿಲಯಕ್ಕೆ ಗ್ರಾಂಟ್, ಅಥವಾ ಫಂಡ್ ಬರಲು ಸಹಾಯವಾಗುತ್ತದೆ. ದಯಮಾಡಿ ಇದನ್ನು ಒಪ್ಪಿಕೊಳ್ಳಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಅಧ್ಯಕ್ಷರೆ, ಈ ಮಸೂದೆಯಲ್ಲಿ designate for such period as may be specified, an affiliated college, department or unit as an Autonomous College for any course of study ಎಂದು ಇರುವುದರಿಂದ ಒಂದೊಂದು ಕಾಲೇಜನ್ನೂ ಕೂಡ ಆಟಾನಮಸ್ ಕಾಲೇಜ್ ಆಗಿ ಪರಿಗಣನೆ ಮಾಡುವುದಕ್ಕೆ ಬರುತ್ತದೆ. ಅದು ಸರಿಯೆ ? ನಾಳೆ ದಿವಸ ನ್ಯಾಷನಲ್ ಕಾಲೇಜನ್ನಾಗಲಿ ಅಥವಾ ಸೆಂಟ್ರಲ್ ಕಾಲೇಜನ್ನಾಗಲಿ ಒಂದೊಂದು ಯೂನಿವರ್ಸಿಟಿ ತರಹ ಮಾಡುವುದಕ್ಕೆ ಸಾಧ್ಯತೆ ಇದೆ. ಹಾಗಾದರೆ ಯೂನಿವರ್ಸಿಟಿ ಏತಕ್ಕೆ ಬೇಕು ? ಆ ಕಾಲೇಜುಗಳು ವಿಶ್ವವಿದ್ಯಾನಿಲಯದ ನಿಯಮಾವಳಿಗನುಗುಣವಾಗಿ ಕೆಲಸ

ಮಾಡಬೇಕು, ಹಾಗೆ ಒಂದು ವೇಳೆ ಸರಿಯಾಗಿ ಫಂಕ್ಷನ್ ಮಾಡದೇ ಹೋದರೆ ಅದನ್ನು ಕ್ಯಾನ್ಸಲ್ ಮಾಡುವುದಕ್ಕೂ ಸಹ ಇದರಲ್ಲಿ ಅವಕಾಶ ಇದೆ. ಆದರೆ ಪ್ಲಾನಿಂಗ್ ಬೋರ್ಡ್ ತೀರ್ಮಾನವನ್ನು ಅಕಾಡೆಮಿಕ್ ಕೌನ್ಸಿಲ್ ಸಿಂಡಿಕೇಟ್ ಮತ್ತು ಸೆನೆಟ್ ಒಂದು ವೇಳೆ ಒಪ್ಪಿಕೊಳ್ಳದೇ ಹೋದರೆ ಆವಾಗ ಪ್ಲಾನಿಂಗ್ ಬೋರ್ಡ್ ಇರುವ ಅವಶ್ಯಕತೆ ಇರುವುದಿಲ್ಲವಲ್ಲ ?

ಶ್ರೀ ಬಿ. ರಾಚಯ್ಯ.— ಹಾಗೇನೂ ಇಲ್ಲ. ಅದರ ಬಗ್ಗೆ ಒಂದು ರೆಕಗ್ನಿಷನ್ ಆಗಲಿ ಅಥವಾ ಅದು ಫಂಕ್ಷನ್ ಆಗದೆ ಇದ್ದರೆ ಅದರ ಬಗ್ಗೆ ಅವರೇ ತೀರ್ಮಾನ ಮಾಡುತ್ತಾರೆ. ಅದರ ಬಗ್ಗೆ ನಾವೇನೂ ಯೋಚನೆ ಮಾಡಬೇಕಾಗಿಲ್ಲ. ಯು.ಜಿ.ಸಿ. ಅವರ ಒಂದು ಸಲಹೆಯ ಪ್ರಕಾರವೇ ನಾವು ಈ ಒಂದು ತಿದ್ದುಪಡಿ ತಂದಿದ್ದೇವೆ. ಇದನ್ನು ಒಪ್ಪಿಕೊಳ್ಳದೇ ಹೋದರೆ ನಮಗೆ ಅವರಿಂದ ಯಾವ ವಿಧವಾದ ಫಂಡ್ ಆಗಲಿ, ಗ್ರಾಂಟ್ ಆಗಲಿ, ಅಥವಾ ಯಾವ ಸಹಾಯವೂ ಸಿಕ್ಕುವುದಿಲ್ಲ. ಏನೂ ವಿಧಿ ಇಲ್ಲದೆ ಈ ಒಂದು ತಿದ್ದುಪಡಿಯನ್ನು ತರಬೇಕಾಗಿದೆ. ಆದುದರಿಂದ ದಯಮಾಡಿ ಈ ಸಭೆ ಇದನ್ನು ಒಪ್ಪಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

Mr. Deputy Speaker.— Tee question is : " That the Karnataka State Universities (Amendment) Bill, 1984 be taken into consideration ".

The motion was adopted

Clause No. 2 to 5

Mr. Deputy Speaker.— The qnestion is : " That Clauses 2 to 5 both inclusive do stand part of the Bill ".

The motion was adopted and clauses 2 to 5 both inclusive were added to the Bill.

Clause 1, etc.

Mr. Deputy Speaker.— The question is : " That Clause 1, the Long Title, the Preamble and the Enacting Formula do stand part of the Bill ".

The motion was adopted and Clause 1, the Long Title, the Preamble and the Enacting Formula were added to the Bill.

MOTION TO PASS

Sri B. Rachaiah.— Sir, I beg to move : " That the Karnataka State Universities (Amendment) Bill, 1984 be passed ".

Mr. Deputy Speaker.— The question is : " That the Karnataka State Universities (Amendment) Bill, 1984 be passed ".

The motion was adopted and the Bill was passed.

The Karnataka Rent Control (Amendment) Bill, 1984.

Motion to Consider

Sri A. Lakshmisagar (Minister of Law and Parliamentary Affair, Housing and Public Grievances).— Sir, I beg to move : " That the Karnataka Rent Control (Amendment) Bill, 1984 be taken into consideration ".

The question was proposed

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೇ, ಈ ಒಂದು ಮಸೂದೆಯಲ್ಲಿ ಸ್ವಲ್ಪ ತೊಂದರೆ ಇತ್ತು. ಅದೇನೆಂದರೆ ಯಾವನಾದರೂ ಸರ್ಕಾರಿ ನೌಕರ ತಾನು ಕಟ್ಟಿದ್ದ ಸ್ವಂತ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರೂ ಸಹ ಆತನು ಸೇವೆಯಿಂದ ನಿವೃತ್ತನಾದ ಮೇಲೆ ತನ್ನ ಮನೆಯನ್ನು ವಾಪಸ್ಸು ಪಡೆಯುವುದಕ್ಕೆ ಬಹಳ ತೊಂದರೆ ಇತ್ತು. ಅದಕ್ಕೆ ಕೆಲವು ನಿಯಮಾವಳಿ